ಮಧುಗಿರಿ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ
ನ್ಯಾಯಾಲಯದಲ್ಲಿ
ಓ.ಎಸ್. 376/2015

ವಾದಿಗಳು:- ವಿರುದ್ಧ ಪ್ರತಿವಾದಿಗಳು:-
ಗೋಪಾಲಪ್ಪ ಮತ್ತು ಇತರರು ಚಿಕ್ಕಮ್ಮ ಮತ್ತು ಇತರರು

**ವಾದಿಯ ಪರ ಸಾಕ್ಷಿದಾರರ ಮುಖ್ಯ ವಿಚಾರಣಾ ಪ್ರಮಾಣ ಪತ್ರ** PW 2

1) ಸಾಕ್ಷಿದಾರರ ಹೆಸರು : ಬಂಡಿ ವೀರಯ್ಯ
2) ತಂದೆಯ ಹೆಸರು : ಕರಿಯಣ್ಣ
3) ವಯಸ್ಸು : 67 ವರ್ಷ
4) ವೃತ್ತಿ : ವ್ಯವಸಾಯ
5) ವಾಸ : ಬಡಿಗೊಂಡನಹಳ್ಳಿ ಗ್ರಾಮ, ದೊಡ್ಡೇರಿ ಹೋಬಳಿ, ಮಧುಗಿರಿ ತಾಲ್ಲೂಕು.

ಈ ಮೇಲ್ಕಂಡ ಸಾಕ್ಷಿದಾರನಾದ ನಾನು ಪ್ರಮಾಣ ಪೂರ್ವಕವಾಗಿ ಹೇಳುವುದೇನೆಂದರೆ,

ನಾನು ವಾದಿ ಮತ್ತು ಪ್ರತಿವಾದಿಯರನ್ನು ನೋಡಿರುತ್ತೇನೆ. ದಾವಾ ಸ್ವತ್ತನ್ನು ನೋಡಿರುತ್ತೇನೆ. ದಾವಾ ಸ್ವತನ್ನು ವಾದಿಯ ತಾಯಿ ಗಂಗಮ್ಮನವರು ಚಿಕ್ಕದೊಡ್ಡಯ್ಯನ ಮಗ ದೊಡ್ಡಲಿಂಗಪ್ಪ ಮತ್ತು ಚಿಕ್ಕಲಿಂಗಪ್ಪನ ಮಗ ಬಿ. ದೊಡ್ಡಲಿಂಗಯ್ಯನವರಿಂದ ದಿನಾಂಕ 14-05-1970 ಶುದ್ದ ಕ್ರಯಕ್ಕೆ ಕೊಂಡಿರುತ್ತಾರೆ. ಅಂದಿನಿಂದ ವಾದಿಯ ತಾಯಿಯವರ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದರು. ಸದರಿ ಗಂಗಮ್ಮನವರ ಮರಣಾ ನಂತರ ಅವರ ವಾರಸುದಾರರಾಗಿ ಈ ಕೇಸಿನ ವಾದಿಗಳು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತಾರೆ.

ಈ ಕೇಸಿನ ಪ್ರತಿವಾದಿಗಳಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು, ಅಧಿಕಾರ, ಸ್ವಾಧೀನ ಇರುವುದಿಲ್ಲ. ನಾನು ಅದೇ ಊರಿನವನಾದ್ದರಿಂದ ಮತ್ತು ದಾವಾ ಸ್ವತ್ತನ್ನು ನಾನು ನೋಡಿರುವುದರಿಂದ ನನಗೆ ಈ ವಿಚಾರ ಗೊತ್ತು.

ಈ ಮೇಲ್ಕಂಡ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

ಗುರುತು ಬಲ್ಲವರು,

NOTARY
B.A. ANNAPURNADEVI
MADHUGIRI
REVENUE TALUK
TUMAKURU DIST
LAW-LCL/56/2023
EXP 05/09/2028
GOVT. OF KARNATAKA

ವಕೀಲರು,
ಮಧುಗಿರಿ
ದಿನಾಂಕ:- 8/6/26

ಪ್ರಮಾಣಕರ್ತರ ಸಹಿ.

SWORN TO BFORE ME

B.A. ANNAPURNADEVI, B.A., LL.B
ADVOCATE & NOTARY
GOVT. OF KARNATAKA
Bus Stand Road,
MADHUGIRI - 572132
Tumkur Dist
8/6/2026

No. of Corrections:- Two only

ಓ.ಎಸ್.376/2015
ಪಿ.ಡಬ್ಲ್ಯೂ-2

ದಿನಾಂಕ: **08.06.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ: ವಾದಿ ಪರ ಶ್ರೀ ಬಿ.ಎಂ.ಎಂ. ವಕೀಲರಿಂದ:

ನಾನು ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡು ಸರಿ ಇರುತ್ತದೆಂದು ಎಂದು ಒಪ್ಪಿ ಸಹಿ ಮಾಡಿರುತ್ತೇನೆ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

08/6/2026

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ